ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ–2

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 20)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ತಿಂಗಳ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ:– ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32)(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (13)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(13–ಎ)"ವಿದ್ಯುನ್ಮಾನ ತೆರಿಗೆ ರಿಜಿಸ್ಟರ್" ಎಂದರೆ, ತೆರಿಗೆ ಬೆಲೆಪಟ್ಟಿಯ ನೀಡಿಕೆ ಅಥವಾ ಅಂಥ ಮಾರಾಟದ ಬಿಲ್ಲುಗಳನ್ನು ನೀಡಲು ಮತ್ತು ಅಂಥ ಮಾರಾಟದ ವಿವರಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಬಳಸಲಾದ ಒಂದು

ಸುಭದ್ರ ಹಣಕಾಸು ವಿದ್ಯುನ್ಮಾನ ಸಾಧನ ಮತ್ತು ಇದು ಒಂದು ಮುದ್ರಣಯಂತ್ರ ಹಾಗೂ ವ್ಯಾಪಾರಿಯ ಅಥವಾ ಅವನ ಏಜಂಟನ ಸಹಿಯನ್ನು ಹಾಕಲು ಬಳಸುವ ಒಂದು ಯಂತ್ರ ಸಾಧನವನ್ನೂ ಒಳಗೊಳ್ಳುತ್ತದೆ.

3. 11ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ "ಮೇಲೆ ಕಡಿತವನ್ನು" ಎಂಬ ಪದಗಳಿಗೆ "ಸಂಬಂಧದಲ್ಲಿ ಕಡಿತ ಮಾಡಲಾಗಿದೆಯೆಂದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 19ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ,–

(1) ಶೀರ್ಷಿಕೆಯಲ್ಲಿ "ಬಳಕೆಯಲ್ಲಿಯ" ಎಂಬ ಪದದ ತರುವಾಯ "ಅಥವಾ ತೆರಿಗೆ ಸಂದಾಯದ ಯೋಜನೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪರ ಕ್ರಮದಲ್ಲಿ ಬಳಸಿಕೊಂಡ ಯಾವುದೇ ಸರಕುಗಳ ಮೇಲೆ ಹೂಡುವಳಿ ತೆರಿಗೆಯನ್ನು ಕಳೆದ ತರುವಾಯ 15ನೇ ಪ್ರಕರಣದ ಅಡಿಯಲ್ಲಿ ತೆರಿಗೆಯ ಬಗ್ಗೆ ರಾಜಿಯನ್ನು ಆಯ್ಕೆ ಮಾಡಿಕೊಂಡಲ್ಲಿ ವ್ಯಾಪಾರಿಯು ಹಾಗೆ ಆಯ್ಕೆ ಮಾಡಿಕೊಂಡ ದಿನಾಂಕದಂದು ಆತನ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳ ಮೇಲೆ ಹಾಗೆ ಕಳೆದ ಹೂಡುವಳಿ ತೆರಿಗೆಯು ಅಂಥ ದಿನಾಂಕದ ನಂತರದ ತೆರಿಗೆಯ ಅವಧಿಯಲ್ಲಿ ಮರು ಸಂದಾಯ ವಾಗಬಹುದಾಗಿರತಕ್ಕದ್ದು ಮತ್ತು ಹಾಗೆ ಮರು ಸಂದಾಯ ಮಾಡಬೇಕಾದ ಹೂಡವಳಿ ತೆರಿಗೆಯನ್ನು ಅಂಥ ದಿನಾಂಕದಂದು ಅಂಥ ಸರಕುಗಳ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕತಕ್ಕದ್ದು."

5. 23ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿ "ಆರ್ಜಿಯನ್ನು ಸಲ್ಲಿಸಬಹುದು" ಎಂಬ ಪದಗಳ ತರುವಾಯ "ಮತ್ತು ಅಂಥ ವ್ಯಾಪಾರಿಯು 22ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಹೊಣೆಗಾರನಾದ ಮೇಲೆ ಹಾಗೆ ಅವನು ಹೊಣೆಗಾರನಾದ ದಿನಾಂಕದಂದು 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು 11ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಹೂಡುವಳಿ ತೆರಿಗೆಯನ್ನು ಕಳೆಯುವುದಕ್ಕೆ ಅರ್ಹನಾಗಿರತಕ್ಕದ್ದು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

6. 27ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 27ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ತೀರಿಹೋಗಿರುವ ವ್ಯಕ್ತಿಯ ಸಂದರ್ಭದಲ್ಲಿ ಆತನ ಕಾನೂನುಬದ್ಧ ವಾರಸುದಾರರು ನೋಂದಣಿಯ ವರ್ಗಾವಣೆಗಾಗಿ ಅರ್ಜಿಯನ್ನು ಹಾಕಿಕೊಂಡ ಮೇಲೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಲಾದ ಪ್ರಾಧಿಕಾರವು ಅದನ್ನು ರದ್ದುಗೊಳಿಸುವ ಬದಲು ಆ ಕಾನೂನುಬದ್ಧ ವಾರಸುದಾರರಿಗೆ ನೋಂದಣಿ ಪ್ರಮಾಣಪತ್ರವನ್ನು ವರ್ಗಾಯಿಸಲು ಅನುಮತಿ ನೀಡಬಹುದು".

7. 31ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 31ನೇ ಪ್ರಕರಣದಲ್ಲಿ,–

(1) (2)ನೆ ಪ್ರಕರಣದ ತರುವಾಯೀ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(2–ಎ) ಆಯುಕ್ತನು, ತಾನು ಅಧಿಸೂಚಿಸಬಹುದಾದ ವ್ಯಾಪಾರಿ ವರ್ಗಗಳಿಗೆ ಸೇರಿದ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಥ ವ್ಯಾಪಾರಿಯ ತೆರಿಗೆ ಹೊಣೆಗಾರಿಕೆ ಮೇಲೆ ಪರಿಣಾಮ ಬೀರಬಹುದಾದ ಯಾವುದೇ ವಿಷಯ ಅಥವಾ ವ್ಯವಹಾರಗಳ ಸಂಬಂಧದಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದನ್ನು ಸಾಧ್ಯವಾಗಿಸುವ ಉದ್ದೇಶದಿಂದ ನಿಯಮಿಸಬಹುದಾದಂಥ ವಿಧದ ಮತ್ತು ವಿವರಣೆಯ ಮತ್ತು ನಿಯಮಿಸಬಹುದಾದಂತೆ ಭದ್ರಗೊಳಿಸಬಹುದಾದಂಥ ಒಂದು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಬೇಕೆಂದು ಮತ್ತು ಬಳಸಬೇಕೆಂದು ಅಗತ್ಯಪಡಿಸಬಹುದು.

(2–ಬಿ) 29ನೇ ಪ್ರಕರಣದ (1) ರಿಂದ (3)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, (2–ಎ) ಉಪಪ್ರಕರಣದ ಅಡಿಯಲ್ಲಿ ಬರುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮಾರಾಟ ಮಾಡಿದ ಸರಕುಗಳ ಮೌಲ್ಯವು ಏನೇ ಇದ್ದರೂ ತೆರಿಗೆ ದರ ಪಟ್ಟಿಯನ್ನು ಅಥವಾ ಮಾರಾಟ ಬಿಲ್ಲುಗಳನ್ನು ವಿದ್ಯುನ್ಮಾನ ತೆರಿಗೆ ರಿಜಿಸ್ಟರ್ ಮೂಲಕ ನೀಡತಕ್ಕದ್ದು ಮತ್ತು ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ವೆಚ್ಚವನ್ನು ನಿಯಮಿಸಬಹುದಾದ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ವಸೂಲಿ ಮಾಡಿಕೊಳ್ಳಲು ಅನುಮತಿಸತಕ್ಕದ್ದು".

(2) (4)ನೇ ಉಪ ಪ್ರಕರಣದಲ್ಲಿ "ಯಾರ ತೆರಿಗೆ ಸಂದಾಯ ಮಾಡಬೇಕಾದ ವಹಿವಾಟು" ಎಂಬ ಪದಗಳಿಗೆ "ಯಾರ ಒಟ್ಟು ವಹಿವಾಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 35ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 35ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಇಪ್ಪತ್ತು ದಿನಗಳೊಳಗೆ" ಎಂಬ ಪದಗಳ ತರುವಾಯ "ಅಥವಾ ಹದಿನೈದು ದಿನಗಳೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

9. 52ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 52ನೇ ಪ್ರಕರಣದಲ್ಲಿ,–

(1) (1)ನೇ ಉಪ ಪ್ರಕರಣದಲ್ಲಿ,

(ಎ) (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿ–1) ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶಿಸುವುದು;";

(ಬಿ) (ಇ) ಖಂಡದಲ್ಲಿ,

(i) "ರಿಜಿಸ್ಟರುಗಳು" ಎಂಬ ಪದದ ಮೊದಲು "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು,

(ii) "ದಾಖಲೆಗಳು" ಎಂಬ ಪದಗಳಿಗೆ ಮೊದಲು "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು,

(2) (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(1–ಎ) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಪ್ರಾಧಿಕರಿಸಿದ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ತಾನು ನಿರ್ದಿಷ್ಟಪಡಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಆತನ ವ್ಯವಹಾರದ ಚಟುವಟಿಕೆಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳು, ರಿಜಿಸ್ಟರುಗಳು, ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು."

(3) (2)ನೇ ಉಪ ಪ್ರಕರಣದಲ್ಲಿ "(1)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು" ಎಂಬ ಅವರಣ ಚಿಹ್ನೆಗಳು, ಅಂಕೆ ಹಾಗೂ ಪದಗಳಿಗೆ "(1)ನೇ ಅಥವಾ (1–ಎ) ಉಪ ಪ್ರಕರಣಗಳ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿ ಅಥವಾ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು" ಎಂಬ ಅವರಣ ಚಿಹ್ನೆಗಳು, ಅಂಕಿಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. 53ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 53 ಪ್ರಕರಣದಲ್ಲಿ, (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದದ ತರುವಾಯ "ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. 62ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 62ನೇ ಪ್ರಕರಣದಲ್ಲಿ, (6–ಎ) ಉಪಪ್ರಕರಣದ (ii) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ii) ಅಫೀಲು ಪ್ರಾಧಿಕಾರವು ಪ್ರಕರಣದ ಸುನಾವಣೆಯು ಮುಕ್ತಾಯವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಪೀಲಿನ ವಿಲೆಯ ಆದೇಶವನ್ನು ಹೊರಡಿಸತಕ್ಕದ್ದು."

12. 64ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 64ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕದ್ದು, ಎಂದರೆ:–

"ಪರಂತು, 62ನೇ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು ಕೋರಿದ ಅಪೀಲನ್ನು ಪೂರ್ಣವಾಗಿ ಅನುಮತಿಸಿದ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳು ಅನ್ವಯವಾಗತಕ್ಕದ್ದಲ್ಲ."

13. 74ನೇ ಪ್ರಕರಣದ ತಿದ್ದುಪಡಿ:– ಮೂಲ ನಿಯಮದ 74ನೇ ಪ್ರಕರಣದ (4)ನೇ ಉಪ ಪ್ರಕರಣದಲ್ಲಿ "ದಂಡ ನೀಡಲು ತಪ್ಪುವುದು" ಎಂಬ ಪದಗಳಿಗೆ "ಪರಿಶೋಧಿತ ಲೆಕ್ಕ ಪತ್ರಗಳ ವಿವರ ಪತ್ರವನ್ನು ಸಲ್ಲಿಸುವ ವಿಫಲತೆಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

14. 77ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 77ನೇ ಪ್ರಕರಣದಲ್ಲಿ,

(1) ಶೀರ್ಷಿಕೆಯಲ್ಲಿ "ಮೊಹರುಗಳಿಗೆ" ಎಂಬ ಪದದ ತರುವಾಯ "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳಿಗೆ" ಎಂಬ ಅಲ್ಪವಿರಾಮ ಮತ್ತು ಪದಗಳನ್ನು ಸೇರಿಸತಕ್ಕದ್ದು.

(2) (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನೂ ಸೇರಿಸತಕ್ಕದ್ದು, ಎಂದರೆ:–

"(1–ಎ) 31ನೇ ಪ್ರಕರಣದ (2–ಎ) ಉಪ ಪ್ರಕರಣದ ಅಡಿಯಲ್ಲಿ ಬರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು:–

(ಎ) ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಲು ನಿರಾಕರಿಸಿದಲ್ಲಿ; ಅಥವಾ

(ಬಿ) ಸ್ಥಾಪಿತ ವಿದ್ಯುನ್ಮಾನ ರಿಜಿಸ್ಟರನ್ನು ಬಳಸಲು ನಿರಾಕರಿಸಿದರೆ ಅಥವಾ ವಿಫಲನಾದರೆ; ಅಥವಾ

(ಸಿ) ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ಭದ್ರತೆಗೆ ಬಳಸಲಾದ ಮೊಹರನ್ನು ತೆಗೆದುಹಾಕಿದರೆ ಅಥವಾ ಯಾವುದೇ ರೀತಿಯಲ್ಲಿ

ಹಸ್ತಕ್ಷೇಪ ಮಾಡಿದರೆ ಅಥವಾ ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ನಾಶಗೊಳಿಸಿದರೆ ಅಥವಾ ನಾಶಗೊಳಿಸಲು ಪ್ರಯತ್ನಿಸಿದರೆ,

–ಅಂಥ ವ್ಯಾಪಾರಿಯು, ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರ ದರ್ಜೆಯ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ದರ್ಜೆಯ ನ್ಯಾಯಾಲಯದಿಂದ ಅಪರಾಧ ನಿರ್ಣಯಕ್ಕೆ ಒಳಗಾದರೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಮತ್ತು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸಕ್ಕೆ ಒಳಗಾಗಲು ಬದ್ಧನಾಗಿರತಕ್ಕದ್ದು".

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(i) ಕೆಲವು ವರ್ಗದ ವ್ಯಾಪಾರಿಗಳು ತಮ್ಮ ಎಲ್ಲಾ ಮಾರಾಟಗಳ ಲೆಕ್ಕಗಳನ್ನು ಇಟ್ಟುಕೊಂಡು ಬರುವಂತೆ ಮತ್ತು ತೆರಿಗೆಯನ್ನು ಸರಿಯಾಗಿ ಸಂದಾಯ ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ಅವರುಗಳು ಹಸ್ತಕ್ಷೇಪ ಮಾಡಲಾಗದ (ಟ್ಯಾಂಪರ್ ಪ್ರೂಫ್) ವಿದ್ಯುನ್ಮಾನ ಬಿಲ್ಲು ನೀಡಿಕೆ ಯಂತ್ರಗಳನ್ನು ಉಪಯೋಗಿಸುವಂತೆ ಕಡ್ಡಾಯಗೊಳಿಸುವುದು;

(ii) ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಇವರು, ನೋಂದಾಯಿತ ವ್ಯಾಪಾರಿಗಳ ಲೆಕ್ಕಪತ್ರಗಳನ್ನು ಪರಿಶೀಲಿಸಲು ಮತ್ತು ಅಂಥ ವ್ಯಾಪಾರಿಗಳು ಸಲ್ಲಿಸಿದ ವಿವರ ಪಟ್ಟಿಕೆಗಳು ಸರಿಯಾಗಿದೆಯೆಂದು ಪರಿಶೀಲಿಸಲು ಲೆಕ್ಕ ಪರಿಶೋಧನಾ ಸಿಬ್ಬಂದಿ ತಂಡವನ್ನು ನಿಯೋಜಿಸುವುದಕ್ಕೆ ಅಧಿಕಾರವನ್ನು ನಿಡುವುದು;

(iii) ತೆರಿಗೆ ಸಂದಾಯದ ರಾಜಿ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವ್ಯಾಪಾರಿಯು ತಾನು ಕಳೆದಿದ್ದ ಹೂಡುವಳಿ ತೆರಿಗೆಯನ್ನು ಮರು ಸಂದಾಯ ಮಾಡುವುದು;

(iv) ಸ್ವ–ಇಚ್ಛೆಯಿಂದ ನೋಂದಾಯಿತರಾದ ವ್ಯಾಪಾರಿಗಳ ತೆರಿಗೆ ವಿಧಿಸಬಹುದಾದ ಒಟ್ಟು ವಹಿವಾಟು ಕನಿಷ್ಠ ನೋಂದಾಯಿತ ಪರಿಮಿತಿಯನ್ನು ಮೀರಿದಾಗ ಹೂಡುವಳಿ ತೆರಿಗೆಯನ್ನು ಕಳೆಯಲು ಅವಕಾಶ ಕಲ್ಪಿಸಬಹುದು;

(v) ನಲ್ವತ್ತು ಲಕ್ಷವನ್ನು ಮೀರಿದ ಒಟ್ಟು ವಹಿವಾಟುವುಳ್ಳ ವ್ಯಾಪಾರಿಗಳ ಲೆಕ್ಕಪತ್ರಗಳನ್ನು ಪರಿಶೋಧಿಸುವುದು;

(vi) ಸರಕುಗಳ ಸಾಗಾಣಿಕೆಗಾಗಿ ತೆಗೆದುಕೊಂಡು ಹೋಗಬೇಕಾದ ದಾಖಲೆಗಳನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vii) ತೀರಿ ಹೋದ ವ್ಯಕ್ತಿಗೆ ನೀಡಿದ್ದ ನೋಂದಾಯಿತ ಪ್ರಮಾಣಪತ್ರವನ್ನು ಅವನ ಕಾನೂನು ಸಮ್ಮತ ವಾರಸುದಾರರಿಗೆ ವರ್ಗಾಯಿಸುವುದು;

(viii) ಅಪೀಲು ಪ್ರಾಧಿಕಾರವು ಅಪೀಲನ್ನು ವಿಲೆ ಮಾಡುವ ಆದೇಶವನ್ನು ಹೊರಡಿಸುವುದಕ್ಕೆ ಕಾಲಪರಿಮಿತಿಯನ್ನು ತೊಂಬತ್ತು ದಿನಗಳಿಗೆ ಹೆಚ್ಚಿಸುವುದು;

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಪ್ರಸ್ತುತ ಉಪಬಂಧಗಳನ್ನು ಸುವ್ಯವಸ್ಥೆಗೊಳಿಸುವುದಕ್ಕಾಗಿ ಕೆಲವೊಂದು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಅದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ವೆಚ್ಚವು ಒಳಗೊಂಡಿರುವುದಿಲ್ಲ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 6– 6ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿರುವ 27ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕವು ತೀರಿ ಹೋದ ವ್ಯಕ್ತಿಗೆ ನೀಡಿದ್ದ ನೋಂದಣಿ ಪ್ರಮಾಣಪತ್ರವನ್ನು ಆತನ ಕಾನೂನು ಸಮ್ಮತ ವಾರಸುದಾರರಿಗೆ ವರ್ಗಾಯಿಸುವುದಕ್ಕಾಗಿ ಷರತ್ತುಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 7– 7ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿರುವ 31ನೇ ಪ್ರಕರಣದ (2–ಎ) ಮತ್ತು (2–ಬಿ) ಉಪಪ್ರಕರಣಗಳು ತೆರಿಗೆ ಬೆಲೆಪಟ್ಟಿಗಳನ್ನು ಮತ್ತು ಮಾರಾಟದ ಬಿಲ್ಲುಗಳನ್ನು ನೀಡಲು ಹಾಗೂ ಅವುಗಳ ನೀಡಿಕೆಗಳನ್ನು ದಾಖಲಿಸಲು ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳನ್ನು ಉಪಯೋಗಿಸುವಂತೆ ಅಗತ್ಯಪಡಿಸುವುದಕ್ಕಾಗಿ ನೋಂದಯಿತ ಮಾರಾಟಗಾರರ ವರ್ಗಗಳನ್ನು ಅಧಿಸೂಚಿಸಲು

ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ ಮತ್ತು ಅಂಥ ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳ ವಿಧ ಮತ್ತು ವಿವರಣೆಗಳನ್ನು ಹಾಗೂ ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳನ್ನು ಪಡೆಯುವ ವಿಧಾನಗಳನ್ನು ನಿಯಮಿಸುವುದಕ್ಕಾಗಿ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಖಂಡ 9(2)– 9(2)ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿರುವ 52ನೇ ಪ್ರಕರಣದ (1–ಎ) ಉಪಪ್ರಕರಣವು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನಿಯೋಜಿಸಿದ ಯಾವುದೇ ಲೆಕ್ಕಪರಿಶೋಧಕ ಸಿಬ್ಬಂದಿ ತಂಡವು ನೋಂದಾಯಿತ ವ್ಯಾಪಾರಿಯ ಲೆಕ್ಕಗಳನ್ನು ಪರಿಶೀಲಿಸಲು ಪ್ರಾಧಿಕರಿಸುವುದಕ್ಕೆ ಆತನಿಗೆ ಅಧಿಕಾರವನ್ನು ನೀಡುತ್ತದೆ.

ಖಂಡ 11– 11ನೇ ಖಂಡದ ಅಡಿಯಲ್ಲಿ ಸೇರಿಸಲು ಉದ್ದೇಶಿಸಿರುವ 62ನೇ ಪ್ರಕರಣದ (6–ಎ) ಉಪಪ್ರಕರಣದ (ii) ನೇ ಖಂಡವು ಮಾಲೀಕ ಅಥವಾ ಸರಕುಗಳ ವಾಹನ ಅಥವಾ ದೋಣಿ, ಹಡಗು ಅಥವಾ ಅಂತಹುದೇ ನೌಕೆಯ ಪ್ರಭಾರದಲ್ಲಿರುವ ವ್ಯಕ್ತಿಯು ಅಂಥ ಸರಕುಗಳ ವಾಹನ ಅಥವಾ ದೋಣಿ, ಹಡಗು ಅಥವಾ ಅಂತಹುದೇ ನೌಕೆಯಲ್ಲಿ ಸಾಗಿಸುವ ಸರಕುಗಳ ಸಂಬಂಧದಲ್ಲಿ ಹೊಂದಿರಬೇಕಾದ ದಾಖಲೆಗಳನ್ನು ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾ ಅಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಅನುಬಂಧ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2003ರ ಕರ್ನಾಟಕ ಅಧಿನಿಯಮ, 32) ಉದ್ಧೃತ ಭಾಗ.

XX XX XX

2 ಪರಿಭಾಷೆಗಳು:– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

XX XX XX

(1) **'ಕೃಷಿ'** ಎಂಬುದು, ಅದರ ವ್ಯಾಕರಣ ವ್ಯತ್ಯಾಸಗಳೊಡನೆ, ತೋಟಗಾರಿಕೆ, ಬೆಳೆಗಳು, ಹುಲ್ಲು ಅಥವಾ ತೋಟದ ಉತ್ಪನ್ನಗಳನ್ನು ಬೆಳೆಸುವುದು ಮತ್ತು ಜಾನುವಾರುಗಳನ್ನು ಮೇಯಿಸುವುದನ್ನು ಒಳಗೊಳ್ಳುತ್ತದೆ, ಆದರೆ ಇದು

ಹೈನುಗಾರಿಕೆ, ಕೋಳಿಸಾಕಣೆ, ತಳಿವರ್ಧನೆ ಮತ್ತು ಕೇವಲ ಮರ ಕಡಿಯುವುದನ್ನು ಒಳಗೊಳ್ಳುವುದಿಲ್ಲ;

XX XX XX

(13) 'ದಸ್ತಾವೇಜು' ಎಂಬುದು ಯಾವುದೇ ವಿಧಾನದಲ್ಲಿಯಾಗಲಿ ಲಿಖಿತವಾದ ಅಥವಾ ಮುದ್ರಿಸಿದ ದಾಖಲೆಗಳು, ಎಲೆಕ್ಟ್ರಾನಿಕ್ ವಿಧಾನದಲ್ಲಿ ರಕ್ಷಿಸಲಾದ (ಸ್ಟೋರ್ ಮಾಡಲಾದ) ಸ್ವಾಮ್ಯಪತ್ರ ಮತ್ತು ಮಾಹಿತಿ ಇವುಗಳನ್ನು ಒಳಗೊಳ್ಳುತ್ತದೆ.

XX XX XX

11. ಹೂಡುವಳಿ ತೆರಿಗೆಯ ನಿರ್ಬಂಧಗಳು:– (ಎ) ಈ ಮುಂದಿನವುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯನ್ನು ಲೆಕ್ಕಹಾಕುವಾಗ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ,–

XX XX XX

(ಸಿ) ಭಾಗಶ: ಅಥವಾ ಪೂರ್ಣವಾಗಿ ಕಾಮಗಾರಿ ಕರಾರುಗಳನ್ನು ತನಗಾಗಿ ನಿರ್ವಹಿಸಿದಕ್ಕೆ ಪ್ರತಿಫಲವಾಗಿ ಯಾವೊಬ್ಬ ಉಪಕರಾರುದಾರನಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡತಕ್ಕ ಯಾವುದೇ ಮೊಬಲಿಗಿನ ಮೇಲೆ ಕಡಿತವನ್ನು ಕ್ಲೇಮು ಮಾಡುವ ಕಾಮಗಾರಿಗಳ ಕರಾರನ್ನು ನಿರ್ವಹಿಸುವ ಯಾವೊಬ್ಬ ವ್ಯಾಪಾರಿಯು ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ.

XX XX XX

19. ಹೂಡುವಳಿ ತೆರಿಗೆಯನ್ನು ಕಡಿತಗೊಳಿಸಿದ ತರುವಾಯ ಬಳಕೆಯಲ್ಲಿಯ ವ್ಯತ್ಯಾಸ:– (1) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ಯಾವುವೇ ಸರಕುಗಳ ಮೇಲೆ ಹೂಡುವಳಿ ತೆರಿಗೆಗಳನ್ನು ಕಡಿತಗೊಳಿಸಿದ್ದರೆ ಮತ್ತು ಆ ಸರಕುಗಳನ್ನು ತನ್ನ ವ್ಯಾಪಾರ ಕ್ರಮದಲ್ಲಿ ಬಳಸಿರದಿದ್ದರೆ ಅಥವಾ ಅವುಗಳು ಕಳೆದಿದ್ದರೆ ಅಥವಾ ಹಾನಿ ಹೊಂದಿದ್ದರೆ, ಕಡಿತಗೊಳಿಸಿದ ಹೂಡುವಳಿ ತೆರಿಗೆಯು ಆ ಸರಕುಗಳನ್ನು ಅಂಥ ಇತರ ಉಪಯೋಗಕ್ಕಾಗಿ ಬಳಸಿದ ದಿನಾಂಕದಿಂದ ಮುಂದಿನ ಅವಧಿಯಲ್ಲಿ ಮರುಸಂದಾಯ ಯೋಗ್ಯವಾಗುತ್ತದೆ.

(2) ಅಂಥ ಸರಕುಗಳನ್ನು ಬಳಕೆಯ ವ್ಯತ್ಯಾಸಕ್ಕೆ ಪೂರ್ವದಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳ ಮಾರಾಟದಲ್ಲಿ ಅಥವಾ ಭಾರತದ ಸರಹದ್ದಿನ ಹೊರಗೆ ರಫ್ತಿನ ಕ್ರಮದಲ್ಲಿ ಯಾವುವೇ ಸರಕುಗಳ ಮಾರಾಟದಲ್ಲಿ ಪೂರ್ಣವಾಗಿಯಾಗಲಿ ಅಥವಾ ಮುಖ್ಯವಾಗಿ ಉಪಯೋಗಿಸಿದ್ದರೆ ಅಥವಾ ಉಪಯೋಗಿಸಲು ಉದ್ದೇಶಿಸಿದ್ದರೆ, ಬಳಕೆಯ ವ್ಯತ್ಯಾಸದ ಸಮಯದಲ್ಲಿ ಅಂಥ ಸರಕುಗಳ ಪ್ರಚಲಿತ ಮಾರುಕಟ್ಟೆ ಮೌಲ್ಯದ ಮೇಲೆ ಮರುಸಂದಾಯ ಮಾಡಬೇಕಾದ ಹೂಡವಳಿ ತೆರಿಗೆಯನ್ನು ಲೆಕ್ಕಹಾಕತಕ್ಕದ್ದು.

XX XX XX

23. ಸ್ವಇಚ್ಛೆಯಿಂದ ನೋಂದಣಿ ಮಾಡಿಸುವುದು:– 22ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಲ್ಲದಿದ್ದರೂ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಮಾರಾಟ ಮಾಡುವ ಯಾವೊಬ್ಬ ವ್ಯಾಪಾರಿಯು ಸ್ವಇಚ್ಛೆಯಿಂದ ನೋಂದಣಿ ಮಾಡಲು ಬಯಸಿದರೆ ನಿಯಮಿಸಬಹುದಾದ ಅಂಥ ನಮೂನೆ ಮತ್ತು ಅಂಥ ವಿಧಾನದಲ್ಲಿ ಸರಿಯಾದ ಹಾಗೂ ಪೂರ್ಣ ವಿವರಗಳನ್ನು ನೀಡಿ ನಿಯಮಿಸಬಹುದಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

XX XX XX

27. ನೋಂದಣಿಯ ರದ್ದಿಯಾತಿ:– (1) ಈ ಮುಂದಿನ ಯಾವುದೇ ಸಂದರ್ಭದಲ್ಲಿ ಎಂದರೆ,–

(ಎ) ಒಬ್ಬ ನೋಂದಾಯಿತ ವ್ಯಾಪಾರಿಯು ಯಾವುದೇ ವ್ಯಾಪಾರವನ್ನು ಮುಂದುವರಿಸದಿದ್ದಲ್ಲಿ, ಪೂರ್ಣವಾಗಿ ವರ್ಗಾಯಿಸಿದ್ದಲ್ಲಿ ಅಥವಾ ಅನ್ಯಥಾ ವಿಲೆ ಮಾಡಿದ್ದಲ್ಲಿ; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ; ಅಥವಾ

(ಸಿ) ನೋಂದಾಯಿತ ವ್ಯಾಪಾರಿಯ ಸರಕುಗಳ ಮಾರಾಟದ ತೆರಿಗೆಗೆ ಗುರಿಯಾಗತಕ್ಕ ವಹಿವಾಟು [ಹನ್ನೆರಡು ನಿರಂತರ ತಿಂಗಳುಗಳ] ಯಾವುದೇ ಅವಧಿಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ; ಅಥವಾ

(ಡಿ) ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆಗೆ ಗುರಿಯಾಗತಕ್ಕ ಮಾರಾಟವನ್ನು ಮಾಡದೆ ತೆರಿಗೆಯ ಬೆಲೆ ಪಟ್ಟಿಗಳನ್ನು ನೀಡಿದಲ್ಲಿ, ಅಥವಾ

(ಇ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ಮೃತನಾದಲ್ಲಿ, – ಮತ್ತು ಯಾವುದೇ ಉಚಿತ ಮತ್ತು ಸಾಕಷ್ಟು ಕಾರಣಗಳಿದ್ದರೆ, ನಿಯಮಿಸಲಾದ ಪ್ರಾಧಿಕರವು, ತಾನಾಗಿಯೇ ಆಗಲಿ ಅಥವಾ ವ್ಯಾಪಾರಿಯು ನೀಡಿದ ಅರ್ಜಿಯ ಮೇಲಾಗಲಿ ಅಥವಾ ಮರಣದ ಸಂದರ್ಭದಲ್ಲಿ, ನಿಯಮಿಸಲಾದ ವಿಧಾನದಲ್ಲಿ ಕಾನೂನುಬದ್ಧ ವಾರಸುದಾರರ ಅರ್ಜಿಯ ಮೇಲಾಗಲಿ, ಸಂದರ್ಭದ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಯಾವುದೇ ಪೂರ್ವ ದಿನಾಂಕವನ್ನು ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಿನಾಂಕದಿಂದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು.

XX XX XX

31. ಲೆಕ್ಕ ಪತ್ರಗಳು:– (1) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು, ಸಂದಾಯ ಮಾಡಿದ ಹೂಡುವಳಿ ತೆರಿಗೆ ಮತ್ತು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯೂ ಸೇರಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಪ್ರತಿಯೊಂದು ದರಕ್ಕೆ ಒಳಪಟ್ಟ ಸರಕುಗಳ ಮೌಲ್ಯಗಳನ್ನು ತೋರಿಸುವ ತನ್ನ ಎಲ್ಲಾ ಖರೀದಿಗಳ, ಸ್ವೀಕೃತಿಗಳ, ಮಾರಾಟಗಳ, ಇತರ ವಿಲೆಗಳ, ಉತ್ಪಾದನೆಯ, ತಯಾರಿಕೆಯ ಮತ್ತು ದಾಸ್ತಾನಿನ ನಿಜವಾದ ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಕನ್ನಡ ಅಥವಾ ಇಂಗ್ಲೀಷ್ ಅಥವಾ ಹಿಂದಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂತ ಇತರ ಭಾಷೆಯಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಯಾವೊಬ್ಬ ವ್ಯಾಪಾರಿಯು ಅಥವಾ ಯಾವುದೇ ವ್ಯಾಪಾರಿಗಳ ವರ್ಗವು ಇಟ್ಟುಕೊಂಡುಬಂದ ಮತ್ತು ನಿರ್ವಹಿಸಿದ ಲೆಕ್ಕ ಪತ್ರಗಳು, ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದ ವಿವರಪಟ್ಟಿಗಳನ್ನು ಪರಿಶೀಲಿಸಲು ಅಥವಾ ಅದರ ಅಡಿಯಲ್ಲಿ ಯಾವುದೇ ತೆರಿಗೆ ನಿರ್ಧರಣೆ ಮಾಡಲು ತನಗೆ ಅಥವಾ ಅದಕ್ಕೆ ಸಾಕಷ್ಟು ಅನುಕೂಲವಾಗಿಲ್ಲವೆಮದು ಆಯುಕ್ತನು ಅಥವಾ ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಅವನು ಅಥವಾ ಅದು, ಆದೇಶದ ಮೂಲಕ, ಯಾವೊಬ್ಬ ವ್ಯಾಪಾರಿ ಅಥವಾ ವ್ಯಾಪಾರಿಗಳ ವರ್ಗವನ್ನು, ಅವನು ಅಥವಾ ಅದು ನಿರ್ದೇಶಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ದಾಸ್ತಾನುಗಳ ತಯಾರಿಕೆ, ಮಾರಾಟಗಳ, ಖರೀದಿಗಳ, ವಿಲೆಗಳ ಅಥವಾ ಮಾರಾಟಗಳ ರೂಪದಲ್ಲಿ ಹೊರತು ಅನ್ಯಥಾ ವರ್ಗಾವಣೆಗಳ ದಾಖಲೆಗಳೂ ಒಳಗೊಂಡಂತೆ ತೆರಿಗೆ ಬೆಲೆಪಟ್ಟಿಯೂ ಸೇರಿದಂತೆ ,ಅಂಥ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಇಡಲು ಅಗತ್ಯಪಡಿಸಬಹುದು.

XX XX XX

(4) ಯಾರ ತೆರಿಗೆ ಸಂದಾಯ ಮಾಡಬೇಕಾದ ವಹಿವಾಟು ಒಂದು ವರ್ಷದಲ್ಲಿ ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್ ಅಥವಾ ಒಬ್ಬ ತೆರಿಗೆ ವೃತ್ತಿದಾರನಿಂದ ಪರಿಶೋಧಿಸತಕ್ಕದ್ದು ಮತ್ತು ಪರಿಶೋಧಿತ ಲೆಕ್ಕಪತ್ರಗಳ ವಿವರಣ ಪಟ್ಟಿಯ ಒಂದು ಪ್ರತಿಯನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು, ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

XX XX XX

35. ವಿವರ ಪಟ್ಟಿಗಳು,– (1) (2) ರಿಂದ (4)ನೇ ಉಪಪ್ರಕರಣಗಳಿಗೆ ಒಳಪಟ್ಟು ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು 9ನೇ ಪ್ರಕರಣದ (2)ನೇ ಉಪ–ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ತೆರಿಗೆ ಸಂದಾಯಕ್ಕೆ ಬದ್ಧವಾದ ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ, ಶಾಸನಬದ್ಧ ನಿಕಾಯ ಮತ್ತು ಒಂದು ಸ್ಥಳೀಯ ಪ್ರಾಧಿಕಾರವು ಎಲೆಕ್ಟ್ರಾನಿಕ್ ವಿಧಾನಗಳು ಸೇರಿದಂತೆ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒಂದು ವಿವರ ಪಟ್ಟಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಹಿಂದಿನ ತಿಂಗಳ ಕೊನೆಯ ತರುವಾಯದ ಇಪ್ಪತ್ತು ದಿನಗಳೊಳಗೆ ಅಥವಾ ಇತರೆ ಯಾವುದೇ ತೆರಿಗೆ ಅವಧಿಯೊಳಗೆ ಅಂಥ ವಿವರ ಪಟ್ಟಿಯ ಮೇಲೆ 'ಬಾಕಿ ಇರುವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

XX XX XX

52. ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸಿವುದು ಮತ್ತು ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರಗಳು:– (1) ಈ ಸಂಬಂಧದಲ್ಲಿ ಆಯುಕ್ತನು [ಈ ಕೆಳಗೆ ನಿರ್ದಿಷ್ಟಪಡಿಸಿರುವ ಎಲ್ಲ ಅಥವಾ ಯಾವುವೇ ಅಧಿಕಾರಿಗಳನ್ನು ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ಚಲಾಯಿಸಲು] ಪ್ರಾಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು, ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು.–

(ಎ) ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಸ್ಥಳದಲ್ಲಿ ಅಥವಾ ಇತರ ಯಾವುದೇ ಸ್ಥಳದಲ್ಲಿ ಅಂಥ ವ್ಯವಹಾರವು ನಡೆಯುತ್ತಿದೆ ಎಂದು ಅಥವಾ ಅಂಥ ವ್ಯಾಪಾರಿಯು, ದಸ್ತಾವೇಜುಗಳೂ ಸೇರಿದಂತೆ ಲೆಕ್ಕಪತ್ರಗಳನ್ನು ಇಟ್ಟಿದ್ದಾನೆಂದು ಅಂಥ ಅಧಿಕಾರಿಯು ನಂಬಿದಲ್ಲಿ, ಅಂಥ ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಎ–1) ಅಂಥ ವ್ಯಾಪಾರಿಯು ತೆರಿಗೆ ದರಪಟ್ಟಿಗಳು ಅಥವಾ ಮಾರಾಟದ ಬಿಲ್ಲುಗಳನ್ನು ನೀಡುವುದನ್ನು ಪರೀಕ್ಷಿಸುವುದಕ್ಕಾಗಿ ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಅವರಣದಿಂದ ತಾನು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು, ಯಾವುವೇ ಸರಕುಗಳ ಖರೀದಿ ಮಾಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಿಯು ಹಾಗೆ ಖರೀದಿಸಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ ವ್ಯಾಪಾರಿಯು ಅಥವಾ ವ್ಯವಹಾರದ ಅವರಣಗಳ ಪ್ರಭಾರದಲ್ಲಿರುವ ಯಾವೊಬ್ಬ ವ್ಯಕ್ತಿಯು ತಾನು ನೀಡಿದ್ದ ಯಾವುದೇ ತೆರಿಗೆ ದರಪಟ್ಟಿ ಅಥವಾ ಮಾರಾಟದ ಬಿಲ್ಲನ್ನು ರದ್ದುಪಡಿಸಿ ಸರಕುಗಳಿಗಾಗಿ ಸಂದಾಯಮಾಡಿದ್ದ ಮೊಬಲಗನ್ನು ಮರುಪಾವತಿ ಮಾಡತಕ್ಕದ್ದು.

(ಬಿ) ಒಬ್ಬ ವ್ಯಾಪಾರಿಯ ವ್ಯವಹಾರದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳು, ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಅಂಥ ಸಮಯದಲ್ಲಿ ಮತ್ತು ಅಂಥ ಸ್ಥಳದಲ್ಲಿ ಪರಿಶೀಲನೆಗಾಗಿ ಹಾಜರುಪಡಿಸುವಂತೆ ಅಂಥ ವ್ಯಾಪಾರಿಗೆ ನಿರ್ದೇಶಿಸುವುದು;

(ಸಿ) ವ್ಯಾಪಾರಿಯ ಸ್ವಾಧೀನತೆಯಲ್ಲಿರುವ ಅಥವಾ ಅಂಥ ವ್ಯಾಪಾರಿಯ ಪರವಾಗಿ ಇತರೆ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿರುವ ಅಂಥ ಸರಕುಗಳನ್ನು, ಎಲ್ಲೆಲ್ಲಿ ಇಡಲಾಗಿದೆಯೋ ಆ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಡಿ) ವ್ಯವಹಾರಗಳಿಗೆ ಸಂಬಂಧಪಟ್ಟಂತೆ ವಾಸ್ತವಾಂಶಗಳನ್ನು ಮುಚ್ಚಿಡಲಾಗಿದೆ ಎಂದು ಅನುಮಾನಬಂದಲ್ಲಿ, ವ್ಯಾಪಾರಿಯ ನಿವಾಸ ಸ್ಥಳವೂ ಒಳಗೊಂಡಂತೆ ವ್ಯಾಪಾರಿಯ ಅಥವಾ ಅಲ್ಲಿ ಇರುವ ವ್ಯಾಪಾರಿಯ ಪರವಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಶೋಧನೆ ಮಾಡುವುದೂ ಸೇರಿದಂತೆ, ಅಂಥ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಇ) ಒಬ್ಬ ವ್ಯಾಪಾರಿಯು, ಯಾವುದೇ ರೀತಿಯಲ್ಲಿ ತೆರಿಗೆಯನ್ನು ತಪ್ಪಿಸುವ ಅಥವಾ ತೆರಿಗೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ ಅಥವಾ ತನ್ನ ತೆರಿಗೆ ಬದ್ಧತೆಯನ್ನು ಮರೆಮಾಚುತ್ತಿದ್ದಾನೆಂದು ಅನುಮಾನಿಸಲು ಕಾರಣಗಳಿದ್ದಲ್ಲಿ, ಅಂಥ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ತರುವಾಯ ವ್ಯಾಪಾರಿಯಿಂದ ಯಾವುವೇ ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಮತ್ತು ಯಾರ ಅಭಿರಕ್ಷೆಯಿಂದ ಅಂಥ ಲೆಕ್ಕ ಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಾಪಾರಿಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಆ ಬಗ್ಗೆ ಸ್ವೀಕೃತಿ ಪತ್ರವನ್ನು ಮತ್ತು ಅವನು ಕೋರಿಕೊಂಡಲ್ಲಿ, ಅದರ ಪ್ರತಿಗಳನ್ನು ನೀಡತಕ್ಕದ್ದು ಮತ್ತು ತಾನು ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ಅವಧಿಯವರೆಗೆ ಪರಿಶೀಲನೆ, ವಿಚಾರಣೆ, ಪ್ರಾಷಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹಾರಣೆಗಳಿಗಾಗಿ ಅವುಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಬಹುದು.

XX XX XX

(2) ಮೇಲಿನ 31 ಮತ್ತು 33ನೇ ಪ್ರಕರಣಗಳ ಅಡಿಯಲ್ಲಿನ ದಾಖಲೆಗಳು ಮತ್ತು ಲೆಕ್ಕಪತ್ರಗಳನ್ನು ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ನಿರ್ವಹಿಸಲಾಗಿದ್ದಲ್ಲಿ,

ವ್ಯಾಪಾರಿಯು, ಅಂಥ ಲೆಕ್ಕ ಪತ್ರಗಳು ಮತ್ತು ದಾಖಲೆಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ (1)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು ಅಗತ್ಯಪಡಿಸಬಹುದಾದಂತೆ ಅವುಗಳನ್ನು ಪರಿಶೀಲಿಸಲು ಅವಕಾಶ ನೀಡತಕ್ಕದ್ದು.

XX XX XX

53. ಚೆಕ್‌ಪೋಸ್ಟ್‌ಗಳ ಸ್ಥಾಪನೆ ಮತ್ತು ಸಾಗಣೆಯಲ್ಲಿರುವ ಸರಕುಗಳ ಪರಿಶೀಲನೆ:– (1) ರಾಜ್ಯದಲ್ಲಿನ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ತಪ್ಪಿಸುವುದನ್ನು ತಡೆಹಿಡಿಯುವ ಅಥವಾ ಪ್ರತಿಬಂದಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಥವಾ ಆಯುಕ್ತ್ತು ಅವಶ್ಯಕವೆಂದು ಪರಿಗಣಿಸಿದಲ್ಲಿ ಅದು ಅಥವಾ ಅವನು, ಅಧಿಸೂಚಿಸಬಹುದಾದಂತೆ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ನ್ನು ಅಥವಾ ಸುಂಕದ ಕಟ್ಟೆಯನ್ನು ಅಥವಾ ಅವೆರಡನ್ನು ಸ್ಥಾಪಿಸುವಂತೆ ಅಧಿಸೂಚನೆಯ ಮೂಲಕ, ನಿರ್ದೇಶಿಸಬಹುದು.

(2) ಒಂದು ಸರಕು ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಮಾಲೀಕ ಅಥವಾ ಪ್ರಭಾರ ಹೊಂದಿದ ವ್ಯಕ್ತಿಯು,–

(ಎ) ತನ್ನ ಜೊತೆಯಲ್ಲಿ ಸಂದರ್ಭಾನುಸಾರ ಸರಕು ವಾಹನದ ದಾಖಲೆ, ಟ್ರಿಪ್‌ಶೀಟ್ ಅಥವಾ ಲಾಗ್ ಪುಸ್ತಕವನ್ನು ಒಯ್ಯತಕ್ಕದ್ದು,; ಮತ್ತು

(ಬಿ) ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿ ಸಾಗಿಸುತ್ತಿರುವ ಸರಕುಗಳಿಗೆ ಸಂಬಂಧಪಟ್ಟಂತೆ, ನಿಯಮಿಸಬಹುದಾದಂಥ ದಸ್ತಾವೇಜುಗಳನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಒಯ್ಯತಕ್ಕದ್ದು; ಮತ್ತು

62. ಅಪೀಲುಗಳು,– (1) ನಿಯಮಿಸಲಾದ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದಿಂದ ಅಥವಾ ವ್ಯವಹರಣೆಗಳಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅವುಗಳನ್ನು ಆಕ್ಷೇಪಿಸಿ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

XX XX XX

(6–ಎ) (i) ಅಪೀಲು ಪ್ರಾಧಿಕಾರವು, ತನ್ನ ಮುಂದಿರುವ ಅಪೀಲನ್ನು ವಿಲೆ ಮಾಡುವಾಗ ತೆರಿಗೆ ನಿರ್ಧರಣೆ ಮಾಡಲು ಅಥವಾ ಹೊಸದಾಗಿ ಆದೇಶವನ್ನು ಮಾಡಲು ಪುನರ್ ವಿಚಾರಣೆಗಾಗಿ ಪ್ರಕರಣವನ್ನು ವಾಪಸ್ಸು ಕಳುಹಿಸತಕ್ಕದ್ದಲ್ಲ, ಆದರೆ, ಅಪೀಲನ್ನು ಅದರ ಗುಣ–ದೋಷಗಳ ಮೇಲೆ, ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೆ ಅದನ್ನು ತೆಗೆದುಕೊಂಡು ತಾನು ಸೂಕ್ತವೆಂದು ಭಾವಿಸುವಂತೆ ವಿಲೆ ಮಾಡಲು ಮುಂದುವರಿಯತಕ್ಕದ್ದು.

(ii) ಅಪೀಲು ಪ್ರಾಧಿಕಾರವು, ಪ್ರಕರಣದ ಸುನಾವಣೆಯು ಮುಕ್ತಾಯವಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಅಪೀಲನ್ನು ವಿಲೆ ಮಾಡಿ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಪ್ರಕರಣದ ಅಸಾಧಾರಣ ಮತ್ತು ವಿಶೇಷ ಸನ್ನಿವೇಶಗಳ ಕಾರಣಗಳಿಂದಾಗಿ ಹಾಗೆ ಮಾಡುವುದು ಕಾರ್ಯಸಾಧ್ಯವಾಗದಿದ್ದಲ್ಲಿ, ಅಪೀಲು ಪ್ರಾಧಿಕಾರಿಯು, ಆದೇಶ ಹೊರಡಿಸುವುದಕ್ಕಾಗಿ ಮುಂದಿನ ಒಂದು ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಅಂಥ ದಿನಾಂಕವು ಪ್ರಕರಣದ ಸುನಾವಣೆಯು ಮುಕ್ತಾಯಗೊಂಡ ದಿನದಿಂದ ಅರವತ್ತು ದಿನಗಳಿಗೆ ಮೀರದ ದಿನಾಂಕವಾಗಿರತಕ್ಕದ್ದು ಮತ್ತು ಹಾಗೆ ನಿಗದಿಪಡಿಸಲಾದ ದಿನದ ಬಗ್ಗೆ ಅಪೀಲುದಾರನಿಗೆ ಸೂಕ್ತ ನೋಟೀಸನ್ನು ನೀಡತಕ್ಕದ್ದು.]

XX XX XX

64. ಅಪರ ಆಯುಕ್ತರ ಮತ್ತು ಆಯುಕ್ತನ ಪುನರೀಕ್ಷಣಾ ಅಧಿಕಾರಗಳು.–

(1) ಅಪರ ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುವೇ ಆದೇಶಗಳ ದಾಖಲೆಗಳನ್ನು ಅಥವಾ ದಾಖಲು ಮಾಡಿದ ವ್ಯವಹರಣೆಗಳನ್ನು ತಾನೇ ಸ್ವತಃ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದರಲ್ಲಿ ಜಂಟಿ ಆಯುಕ್ತರ ದರ್ಜೆಗೆ ಮೇಲಿನದಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆಯೆಂದು ಆತನು ಪರಿಗಣಿಸಿದರೆ, ಆತನು ಅವಶ್ಯವಿದ್ದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಮಾಡಿಸಿದ ತರುವಾಯ ತೆರಿಗೆಯ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸುವ ಅಥವಾ ಹೊಸದಾಗಿ ತೆರಿಗೆ ನಿರ್ಧರಣೆಯನ್ನು ನಿರ್ದೇಶಿಸುವ ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ಸಮರ್ಥನೀಯವಾಗುವಂತೆ ಅದರ ಬಗ್ಗೆ ಅಂಥ ಆದೇಶವನ್ನು ಹೊರಡಿಸಬಹುದು.

(2) ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ತಾನೇ ಸ್ವತ: ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಹಾಗೂ ತನಗೆ ಅಧೀನನಾದ ಯಾವೊಬ್ಬ ಅಧಿಕಾರಿಯು, ಅಥವಾ 60ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವು ಆ ಬಗ್ಗೆ ಹೊರಡಿಸಿದ ಯಾವುದೇ

ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆಯೆಂದು ಆತನು ಪರಿಗಣಿಸಿದರೆ, ಆತನು ಅವಶ್ಯವಿದ್ದಲ್ಲಿ ತಾನು ಸೂಕ್ತವೆಂದ ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂತ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಮಾಡಿಸಿದ ತರುವಾಯ ತೆರಿಗೆಯ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸುವ ಅಥವಾ ಹೊಸದಾಗಿ ತೆರಿಗೆ ನಿಧರಣೆಯನ್ನು ನಿರ್ದೇಶಿಸುವ ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ಸಮರ್ಥನೀಯವಾಗುವಂತೆ ಅದರ ಬಗ್ಗೆ ಅಂಥ ಆದೇಶವನ್ನು ಹೊರಡಿಸಬಹುದು.

(3) ಅಪರ ಆಯುಕ್ತನು ಅಥವಾ ಆಯುಕ್ತನು, ಸಂದರ್ಭಾನುಸಾರ (1)ನೇ ಉಪ ಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ,

(ಎ) ಆದೇಶದ ವಿರುದ್ಧ ಅಪೀಲು ಮಾಡಲು ಅವಧಿ ಮುಕ್ತಾಯವಾಗಿರದಿದ್ದರೆ;

(ಬಿ) ವಿಷಯವು 63ನೇ ಪ್ರಕರಣದ ಅಡಿಯಲ್ಲಿ ಒಂದು ಅಪೀಲಿಗೆ ಅಥವಾ ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣೆಗೆ ಒಳಪಟ್ಟಿದ್ದರೆ; ಅಥವಾ

(ಸಿ) ಪರಿಷ್ಕರಿಸಬೇಕೆಂದು ಕೋರಲಾದ ಆದೇಶವನ್ನು ಹೊರಡಿಸಿದ ತರುವಾಯ ನಾಲ್ಕು ವರ್ಷಗಳಿಗೂ ಹೆಚ್ಚಿನ ಅವದಿಯು ಮುಕ್ತಾಯವಾಗಿದ್ದಾರೆ.

XX XX XX

74. ದಾಖಲೆಗಳನ್ನು ಇಡುವುದಕ್ಕೆ ಮತ್ತು ಪರಿಶೋಧಿತ ಲೆಕ್ಕಪತ್ರಗಳು ವಿವರಪತ್ರವನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ದಂಡಗಳು.– (1) XX

(4) ಪರಿಶೋಧಿತ ಲೆಕ್ಕಪತ್ರಗಳ ವಿವರ ಪತ್ರದ ಒಂದು ಪ್ರತಿಯನ್ನು ನಿಯಮಿಸಿದ ಕಾಲದೊಳಗಾಗಿ ಸಲ್ಲಿಸಲು ವಿಫಲನಾದ ಯಾವೊಬ್ಬ ವ್ಯಾಪಾರಿಗೆ ನಿಯಮಿಸಲಾದ ಪ್ರಾಧಿಕಾರವು ಹಾಗೆ ದಂಡ ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಒಂದು ಅವಕಾಶವನ್ನು ನೀಡಿದ ತರುವಾಯ, ಐದು ಸಾವಿರ ರೂಪಾಯಿಗಳ ದಂಡವನ್ನು ಮತ್ತು ದಂಡ ನೀಡಲು ತಪ್ಪುವುದು ಮುಂದುವರೆಯುತ್ತಿರುವವರೆಗೆ ಪ್ರತಿ ದಿನಕ್ಕೆ ಐವತ್ತು ರೂಪಾಯಿಗಳ ಹೆಚ್ಚಿನ ದಂಡವನ್ನು ಸಂದಾಯಮಾಡುವುದಕ್ಕೆ ಗುರಿಯಗತಕ್ಕದ್ದು.

XX XX XX

77. **ಮೊಹರುಗಳಿಗೆ ಮತ್ತು ಲೆಕ್ಕ ನೀಡದಿರುವ ದಾಸ್ತಾನುಗಳಿಗೆ ಸಂಬಂಧಿಸಿದ ದಂಡಗಳ.**– (1) ಯಾವೊಬ್ಬ ವ್ಯಕ್ತಿಯು, ಅವನು, 52ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎಫ್) ಖಂಡದ ಮತ್ತು 53ನೇ ಪ್ರಕರಣದ (4)ನೇ ಉಪ–ಪ್ರಕರಣದ ಉಪಬಂಧಗಳ ಅಡಿಯಲ್ಲಿ ಹಾಕಲಾದ ಒಂದು ಮೊಹರನ್ನು ತೆಗೆದರೆ ಅಥವಾ ಯಾವುದೇ ಬಗೆಯಲ್ಲಿ ಕೆಡಿಸಿದರೆ, ಅವನು, ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಕಡಿಮೆಯಲ್ಲದ ದರ್ಜೆಯ ಒಂದು ನ್ಯಾಯಾಲಯದಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ಮತ್ತು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಬದ್ಧನಾಗಿರತಕ್ಕದ್ದು.

ಅನುಬಂಧ – 3

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 21)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 1932ರ ಮೈಸೂರು ಅಧಿನಿಯಮ IXರ ತಿದ್ದುಪಡಿ.– ಮೈಸೂರು ಜೂಜು ತೆರಿಗೆ ಅಧಿನಿಯಮ, 1932ರ (1932ರ ಮೈಸೂರು ಅಧಿನಿಯಮ IX)ರಲ್ಲಿ,